ಶ್ರೀ ಪಿ. ಜಿ. ಆರ್, ಸಿಂಧ್ಯ(ಸಾರಿಗೆ ಮಂತ್ರಿಗಳು).—

ಅ) ಈಗ ವಿವಿಧ ಪ್ರಾದೇಶಿಕ ಸಾರಿಗೆ ಕಚೇರಿಗಳಲ್ಲಿ ೮ ಜನ ಅಂಶಕಾಲಿಕ ತಾತ್ಕಾಲಿಕ ಕಾವಲುಗಾರರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ.

ಆ) ಅವರುಗಳು ಸುಮಾರು ೧೯೮೦–೮೧ನೇ ಸಾಲಿನಿಂದ ಕೆಲಸ ನಿರ್ವಹಿಸುತ್ತಿದ್ದು ರೂ. ೧೦೮–೦೦ನ್ನು (ಕನ್‌ಸಾಲಿಡೇಟೆಲಿಡ್) ಸಾದಿಲ್ವಾರು ಬಿಲ್ಲಿನ ಆಧಾರದ ಮೇರೆಗೆ ಕೊಡ ಲಾಗುತ್ತಿದೆ.

ಇ) ಪರಿಶೀಲಿಸಲಾಗುವುದು

ದಕ್ಷಿಣ ಕನ್ನಡ ಜಿಲ್ಲೆ ಸರ್ಕಾರಿ ಆಸ್ಪತ್ರೆಯಲ್ಲಿ ಸಿಬ್ಬಂದಿ ಕೊರತೆ

೨೧೩೫. ಶ್ರೀ ವಸಂತ ವಿ. ಸಾಲ್ಯಾನ್(ಬಾಪು).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಟ್ಟು ಉತ್ತರಿಸುವರೇ ?

ಅ) ದ?ಣ ಕನ್ನಡ ಜಿಲ್ಲೆಯ ಸರ್ಕಾರಿ ಆಸ್ಪತ್ರೆಗಳಲ್ಲಿ ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ಕೊರತೆಯನ್ನು ನೀಗಿಸಲು ಸರ್ಕಾರದವರು ಕೈಗೊಂಡ ಕ್ರಮ ಗಳೇನು ?

ಶ್ರೀ ಬಿ. ರಾಚಯ್ಯ(ಆರೋಗ್ಯ ಸಚಿವರು),—

ಅ) ಬಂದಿದೆ.

ಆ) ಈ ಕೊರತೆಯನ್ನು ಇಪ್ಪರಲ್ಲಿಯೇ ನಿವಾರಿಸಲಾಗುವುದು

ದಕ್ಷಿಣ ಕನ್ನಡ ಜಿಲ್ಲೆಯ ಪ್ರತಿ ಮಂಡಲಕ್ಕೆ ಸರ್ಕಾರಿ ಆಸ್ಪತ್ರೆ ತೆರೆಯುವುದು

೨೧೩೭. ಶ್ರೀ ವಸಂತ ವಿ, ಸಾಲಿಯಾನ (ಕಾಪು).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಪ್ರತಿ ಮಂಡಲಕ್ಕೆ ಒಂದು ಸರ್ಕಾರಿ ಆಸ್ಪತ್ರೆ ತೆರೆಯಲು ಸರ್ಕಾರ ಯೋಚಿಸಿದೆಯೇ ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳೇನು ?

ಶ್ರೀ ಬಿ. ರಾಚಯ್ಯ (ಆರೋಗ್ಯ ಮಂತ್ರಿಗಳು).—

ಅ) ಇಲ್ಲ.

ಆ) ಸರ್ಕಾರದ ನೀತಿಯ ಪ್ರಕಾರ ಬಯಲು ಪ್ರದೇಶದಲ್ಲಿ ಪ್ರತಿ ೩೦ ಸಾವಿರ ಜನ ಸಂಖ್ಯೆಗೆ ಒಂದರಂತೆ, ಗುಡ್ಡಗಾಡು ಪ್ರದೇಶದಲ್ಲಿ ಪ್ರತಿ ೨೦ ಸಾವಿರ ಜನಸಂಖ್ಯೆಗೆ ಒಂದರಂತೆ ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರು ಮಾಡಲಾಗುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆ ಯಲ್ಲಿ ಈ ವರ್ಷದ ಗುರಿಯಲ್ಲಿ ೩೩ ಪ್ರಾಥಮಿಕ ಆರೋಗ್ಯ ಘಟಕಗಳನ್ನು ಮೇಲ್ದರ್ಜೆ ಗೇರಿಸಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನಾಗಿ ಪರಿವರ್ತಿಸುವ ಗುರಿಯಿದೆ.